# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೬, ಮೇ, ೨೦೨೬ (ಜ್ಯೇಷ್ಠ, ೦೫, ಶಕವರ್ಷ, ೧೯೪೮)<br>BENGALURU, TUESDAY, 26, MAY, 2026 ( JYAISTHA , 05, SHAKAVARSHA, 1948) | ನಂ. ೩೯೫<br>No. 395 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 91 ಶಾಸನ 2025, ಬೆಂಗಳೂರು, ದಿನಾಂಕ:26.05.2026**

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2026ರ ಮೇ ತಿಂಗಳ 25ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ:31 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 31

(2026ರ ಮೇ ತಿಂಗಳ 26ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2025

(2026ರ ಮೇ ತಿಂಗಳ 25ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024, ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024, ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 ಮತ್ತು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಪ್ರಾಧಿಕಾರ ಅಭಿವೃದ್ಧಿ ಅಧಿನಿಯಮ, 2024ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 18), ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 44), ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 15) ಮತ್ತು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಪ್ರಾಧಿಕಾರ

ಅಭಿವೃದ್ಧಿ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 16)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2024ರ ಕರ್ನಾಟಕ ಅಧಿನಿಯಮ 18ರ ತಿದ್ದುಪಡಿ.-** ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 18)ರ 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ "ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ/ಕರ್ನಾಟಕ ಆಡಳಿತ ಸೇವೆಗಳ (ಸೂಪರ್ ಟೈಮ್ ಸ್ಕೇಲ್)/" ಎಂಬ ಪದಗಳು, ಆವರಣಗಳು ಮತ್ತು ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು.

**3. 2024ರ ಕರ್ನಾಟಕ ಅಧಿನಿಯಮ 44ರ ತಿದ್ದುಪಡಿ.-** ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 44)ರಲ್ಲಿ,-

(i) ಪ್ರಕರಣ 3ರ (4)ನೇ ಉಪಪ್ರಕರಣದ (ಬಿ) ಖಂಡದ ತರುವಾಯ ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"

| | | |
|---|---|---|
| (ಬಿ1) | ಸವದತ್ತಿ ಯಲ್ಲಮ್ಮ ವಿಧಾನ ಸಭಾ ಮತಕ್ಷೇತ್ರದ ವಿಧಾನ ಸಭೆ ಸದಸ್ಯರು | ಪದನಿಮಿತ್ತ ಉಪಾಧ್ಯಕ್ಷರು |

"

(ii) 10ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿರುವ "ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ/ಕರ್ನಾಟಕ ಆಡಳಿತ ಸೇವೆಗಳ (ಸೂಪರ್ ಟೈಮ್ ಸ್ಕೇಲ್)/" ಎಂಬ ಪದಗಳು, ಆವರಣಗಳು ಮತ್ತು ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು.

**4. 2024ರ ಕರ್ನಾಟಕ ಅಧಿನಿಯಮ 15ರ ತಿದ್ದುಪಡಿ.-** ಶ್ರೀ ಘಾಟಿ ಸುಬ್ರಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 15)ರ 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ "ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ/ಕರ್ನಾಟಕ ಆಡಳಿತ ಸೇವೆಗಳ (ಸೂಪರ್ ಟೈಮ್ ಸ್ಕೇಲ್)/" ಎಂಬ ಪದಗಳು, ಆವರಣಗಳು ಮತ್ತು ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು.

**5. 2024ರ ಕರ್ನಾಟಕ ಅಧಿನಿಯಮ 16ರ ತಿದ್ದುಪಡಿ.-** ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 16)ರ 10ನೇ

ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ "ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ/ಕರ್ನಾಟಕ ಆಡಳಿತ ಸೇವೆಗಳ (ಸೂಪರ್ ಟೈಮ್ ಸ್ಕೇಲ್)/" ಎಂಬ ಪದಗಳು, ಆವರಣಗಳು ಮತ್ತು ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 91 SHASHANA 2025, BENGALURU, DATED:26.05.2026

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 31)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

# KARNATAKA ACT NO. 31 OF 2026

(First Published in the Karnataka Gazette Extra-ordinary on the 26th day of May, 2026)

## SHREE CHAMUNDESHWARI KSHETRA DEVELOPMENT AUTHORITY AND CERTAIN OTHER LAWS (AMENDMENT) ACT, 2025

(Received the assent of the Governor on the 25th day of May, 2026)

An Act further to amend Shree Chamundeshwari Kshetra Development Authority Act, 2024, Sri Renuka Yellamma Temple Development Authority Act, 2024, Shree Ghati Subramanya Kshetra Development Authority Act, 2024 and Shree Huligemma Devi Kshetra Development Authority Act, 2024.

Whereas it is expedient to amend Shree Chamundeshwari Kshetra Development Authority Act, 2024 (Karnataka Act No. 18 of 2024), Sri Renuka

Yellamma Temple Development Authority Act, 2024 (Karnataka Act No. 44 of 2024), Shree Ghati Subramanya Kshetra Development Authority Act, 2024 (Karnataka Act No. 15 of 2024) and Shree Huligemma Devi Kshetra Development Authority Act, 2024 (Karnataka Act No. 16 of 2024), for the purpose hereinafter appearing:

Be it enacted by the Karnataka State Legislature in the Seventy sixth year of the Republic of India as follows :-

**1. Short title and commencement.-** (1) This Act may be called Shree Chamundeshwari Kshetra Development Authority and Certain Other Laws (Amendment) Act, 2025.

(2) It shall come into force at once.

**2. Amendment of Karnataka Act 18 of 2024.-** In Shree Chamundeshwari Kshetra Development Authority Act, 2024 (Karnataka Act No. 18 of 2024), in section 10, in sub-section (1), the words, brackets and symbols "Group A Senior scale Officer of Karnataka Government Secretariat Service /Karnataka Administrative Services (Super Time Scale)/"shall be omitted.

**3. Amendment of Karnataka Act 44 of 2024.-** In Sri Renuka Yellamma Temple Development Authority Act, 2024 (Karnataka Act No. 44 of 2024),-

(i) in section 3, in sub-section (4), after clause (b), the following new clause shall be inserted, namely:-

"

| | | |
|---|---|---|
| (b-1) | **Member of Legislative Assembly, Savadatti Yellamma Legislative Assembly Constituency** | Ex-officio Vice Chairman |

"

(ii) in section 10, in sub-section (1), the words, brackets and symbol "Karnataka Administrative Services (Super Time Scale)/Group A Senior Scale Officer of Karnataka Government Secretariat Service" shall be omitted.

**4. Amendment of Karnataka Act 15 of 2024.-** In Shree Ghati Subramanya Kshetra Development Authority Act, 2024 (Karnataka Act No. 15 of 2024), in section 10, in sub-section (1), the words, brackets and symbols "Karnataka Administrative Services (Super Time Scale) / Group A Senior scale Officer of Karnataka Government Secretariat Service /" shall be omitted.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**5. Amendment of the Karnataka Act 16 of 2024.-** In Shree Huligemma Devi Kshetra Development Authority Act, 2024 (Karnataka Act No. 16 of 2024), in section 10, in sub-section (1), the words brackets and symbols "Karnataka Administrative Services (Super Time Scale) / Group A Senior Scale Officer of Karnataka Government Secretariat Service /" shall be omitted."

The above translation of ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 31) be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH